## ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು ವಿರಾಜಪೇಟೆ

## ಸಿ.ಸಿ. ಸಂಖ್ಯೆ 947/2021

ಚಾಸಾ : 16

ಪ್ರಾಸಾ : 14

| | | |
|---|---|---|
| **ಹೆಸರು** | : | ಮೋಹನ್ ರಾಜ್ ಪಿ |
| **ತಂದೆಯ ಹೆಸರು** | : | ಪೆರಿಯಾಸ್ವಾಮಿ |
| **ವಯಸ್ಸು** | : | 39 ವರ್ಷ |
| **ಉದ್ಯೋಗ** | : | ಪಿ ಎಸ್ ಐ, ಶುಂಠಿಕೊಪ್ಪ ಪೋಲಿಸ್ ಠಾಣೆ, |
| **ವಾಸಸ್ಥಳ** | : | ಕುಶಾಲನಗರ |

**ದಿನಾಂಕ : 17-11-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ : ಮಾನ್ಯ ಸ. ಸ. ಅ. ರವರಿಂದ :-**

1. ನಾನು ಏಪ್ರಿಲ್ 2020 ರಿಂದ ಜೂನ್ 2023 ರವರೆಗೆ ಸಿದ್ದಾಪುರ ಪೋಲಿಸ್ ಠಾಣೆಯಲ್ಲಿ ಪಿಎಸ್ಐ ಆಗಿ  ಕರ್ತವ್ಯ ನಿರ್ವಹಿಸಿರುತ್ತೇನೆ.

2. ದಿನಾಂಕ 16-05-2021 ರಂದು ಈ ಪ್ರಕರಣದ ಕಡತವನ್ನು ಚಾಸಾ15 ರವರಿಂದ ಹೊಂದಿಕೊಂಡು ತನಿಖೆಯನ್ನು ಮುಂದವರೆಸಿರುತ್ತೇನೆ. ಅದೇ ದಿನ ಆರೋಪಿ ಪತ್ತೆ ಬಗ್ಗೆ ಚಾಸಾ-8 ರಿಂದ 11 ರವರನ್ನು ನೇಮಿಸಿರುತ್ತೇನೆ. ನಂತರ ಚಾಸಾ8 ರಿಂದ 11 ರವರು ನಾಲ್ಕು ಆರೋಪಿಗಳನ್ನು ಬಾಡಗ ಬಾಣಾಂಗಾಲ ಬಸ್ ನಿಲ್ದಾಣದ ಬಳಿಯಿಂದ ವಶಕ್ಕೆ ಪಡೆದುಕೊಂಡು, ಸಮಯ ಬೆಳಿಗ್ಗೆ 11.30 ಕ್ಕೆ ನನ್ನ ಮುಂದೆ ಹಾಜರುಪಡಿಸಿರುತ್ತಾರೆ. ನಂತರ ನಾಲ್ಕು ಜನ ಆರೋಪಿಗಳನ್ನು ವಿಚಾರಣೆ ಮಾಡಿ, ಅವರುಗಳ ಸ್ವಇಚ್ಛಾ ಹೇಳಿಕೆಗಳನ್ನು ದಾಖಲು ಮಾಡಿರುತ್ತೇನೆ. ನಂತರ ನಾಲ್ಕು ಜನ ಆರೋಪಿಗಳನ್ನು ನನ್ನೊಂದಿಗೆ ಸಿಬ್ಬಂದಿಗಳ ಬೆಂಗಾಲಿನೊಂದಿಗೆ ಕರೆದುಕೊಂಡು ಕೃತ್ಯ ಸ್ಥಳವಾದ ಬಿಬಿಟಿಸಿ ಕಂಪನಿಗೆ ಸೇರಿದ ಚೌಡಿಕಾಡು ಕಾಫೀ ತೋಟದಲ್ಲಿ ಪಂಚರಾದ ಚಾಸಾ-6 ಹಾಗೂ 7 ರವರನ್ನು ಬರಮಾಡಿಕೊಂಡು, ಅವರಿಗೆ ಪ್ರಕರಣದ ವಿಚಾರವನ್ನು ತಿಳಿಸಿ, ಪಂಚರಾಗಿ ಕೋರಿಕೊಂಡ ಮೇರೆಗೆ, ಅದಕ್ಕೆ ಅವರು ಒಪ್ಪಿಕೊಂಡ ಮೇರೆಗೆ ಸದರಿ ಕೃತ್ಯ ಸ್ಥಳದ ಮಹಜರ ಕ್ರಮ ಜರುಗಿಸಿರುತ್ತೇನೆ. ಸಮಯ ಮಧ್ಯಾಹ್ನ 1.45 ರಿಂದ 2.30 ರವರೆಗೆ ಜರುಗಿಸಿರುತ್ತೇನೆ. ಸದರಿ ಮಹಜರಿನ ಸಮಯದಲ್ಲಿ ಫೋಟೋ ಹಾಗೂ ಚಿತ್ರೀಕರಣವನ್ನು ಚಾಸಾ10 ರವರಿಂದ ಮಾಡಿಸಿರುತ್ತೇನೆ.

3. ನಂತರ ಅದೇ ಪಂಚರೊಂದಿಗೆ ಪ್ರಕರಣದ 4 ನೇ ಆರೋಪಿಯ ವಾಸದ ಮನೆಗೆ ಕರೆದುಕೊಂಡು ಹೋಗಿ, ಕೃತ್ಯಕ್ಕೆ ಬಳಸಿದ ಕೆಎ 13 ಎಂ 4035 ನೋಂದಣಿ ಸಂಖ್ಯೆಯ ಬುಲೆರೋ ಜೀಪು, ಕೆಎ 14 ವೈ 1200 ನೋಂದಣಿ ಸಂಖ್ಯೆಯ ಟಿವಿಎಸ್ ಕಂಪನಿಯ ಸ್ಕೂಟರ್, ಪ್ಲಾಸ್ಟಿಕ್ ಥಾಟ್, ಉದ್ದನೆಯ ಹಗ್ಗ, ಎರಡು ಮರದ ಹಿಡಿಯಿರುವ ಕಬ್ಬಿಣದ ಕತ್ತಿ, ಎರಡು ಚೂರಿಗಳು, ಒಂದು ಚಾಕು, ಒಂದು ರೌಂಡ್ ಆಕಾರದ ಮರದ ದಿಮ್ಮಿ, ಎರಡು ಚಾರ್ಜಬಲ್ ಲೈಟ್, ಒಂದು ವಿದ್ಯೂನ್ಮಾನ ತೂಕದ ಯಂತ್ರ, ಎರಡು ಬಿಳಿ ಬಣ್ಣದ ಪ್ಲಾಸ್ಟಿಕ್ ಚೀಲಗಳನ್ನು ಪಂಚರ ಸಮಕ್ಷಮ ಮಹಜರ ಕ್ರಮ ಜರುಗಿಸಿ, ಅವುಗಳನ್ನು ಅಮಾನತ್ತುಪಡಿಸಿಕೊಳ್ಳಲಾಯಿತು. ಸದರಿ ಮಹಜರನ್ನು ಸಮಯ ಮಧ್ಯಾಹ್ನ 3.00 ರಿಂದ 4.00 ಗಂಟೆಯವರೆಗೆ ಜರುಗಿಸಿರುತ್ತೇನೆ ಮಹಜರಿನ ಸಮಯದಲ್ಲಿ ಚಾಸಾ10 ರವರ ಮೂಲಕ ಫೋಟೋ ಹಾಗೂ ವೀಡಿಯೋ ಚಿತ್ರೀಕರಣ ಮಾಡಿಸಿರುತ್ತೇನೆ.

4. ನಂತರ ಅದೇ ಪಂಚರೊಂದಿಗೆ ಪ್ರಕರಣದ 3 ನೇ ಆರೋಪಿಯ ವಾಸದ ಮನೆಗೆ ಕರೆದುಕೊಂಡು ಹೋಗಿ ಕೃತ್ಯಕ್ಕೆ ಬಳಸಿದ ಒಂದು ದ್ವಿಚಕ್ರ ವಾಹನವಾದ ಕೆಎ 12 ಕ್ಯೂ 1704 ನೊಂದಣಿ ಸಂಖ್ಯೆಯ ರಾಯಲಿ ಎನ್ ಫೀಲ್ಡ್ ಬೈಕ್ ಹಾಗೂ ಐನೂರು ಮುಖ ಬೆಲೆಯ ರೂ, 20,000/- ನಗದು ಹಣವನ್ನು ಪಂಚರ ಸಮಕ್ಷಮ ಮಹಜರ ಕ್ರಮ ಜರುಗಿಸಿ, ಅವುಗಳನ್ನು ಅಮಾನತ್ತುಪಡಿಸಿಕೊಳ್ಳಲಾಯಿತು. ಸದರಿ ಮಹಜರನ್ನು ಸಮಯ ಸಂಜೆ 4.45 ರಿಂದ 5.45 ಗಂಟೆಯವರೆಗೆ ಜರುಗಿಸಿರುತ್ತೇನೆ ಮಹಜರಿನ ಸಮಯದಲ್ಲಿ ಚಾಸಾ10 ರವರ ಮೂಲಕ ಫೋಟೋ ಹಾಗೂ ವೀಡಿಯೋ ಚಿತ್ರೀಕರಣ ಮಾಡಿಸಿರುತ್ತೇನೆ. ನಂತರ ಅದೇ ದಿನ ಸದರಿ ಆರೋಪಿಗಳನ್ನು ನ್ಯಾಯಾಲಯದ ಮುಂದೆ ಹಾಜರುಪಡಿಸಿರುತ್ತೇನೆ.

5. ನಂತರ ಅದೇ ದಿನ ಚಾಸಾ6 ರಿಂದ 13 ರವರ ಹೇಳಿಕೆಯನ್ನು ದಾಖಲಿಸಿಕೊಂಡು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ನಂತರ ಸದರಿ ಪ್ರಕರಣದಲ್ಲಿ ಐಪಿಸಿ ಕಲಂ 371 ನ್ನು ಹೆಚ್ಚುವರಿ ಅಳವಡಿಸಿಕೊಂಡು, ನ್ಯಾಯಾಲಯದ ಅನುಮತಿಯನ್ನು ಕೋರಿರುತ್ತೇನೆ. ನಂತರ ಚಾಸಾ-14 ರವರಿಂದ ಹಸುವಿನ ಮರಣೋತ್ತರ ಪರೀಕ್ಷೆಯ ವರದಿಯನ್ನು ಪಡೆದುಕೊಂಡಿರುತ್ತೇನೆ. ನಂತರ ದಿನಾಂಕ 01-06-2021 ರಂದು ಸದರಿ ಪ್ರಕರಣದಲ್ಲಿ ವಶಪಡಿಸಿಕೊಂಡ ಸ್ವತ್ತುಗಳ ಬಗ್ಗೆ ಮಾನ್ಯ ಉಪ ವಿಭಾಗಾಧಿಕಾರಿ, ಮಡಿಕೇರಿಯವರಿಗೆ ವರದಿಯನ್ನು ಸಲ್ಲಿಸಿರುತ್ತೇನೆ. ನಂತರ ದಿನಾಂಕ 19-07-2021 ರಂದು ಕೃತ್ಯ ಸ್ಥಳದ ಬಗ್ಗೆ ದಾಖಲಾತಿಗಳನ್ನು ನೀಡುವಂತೆ ಬಿಬಿಟಿಸಿ ಕಂಪನಿಯವರಿಗೆ ಸೂಚಿಸಿರುತ್ತೇನೆ. ನಂತರ ವರದಿಗಳನ್ನು ಪಡೆದುಕೊಂಡು ಕಡತಕ್ಕೆ

ಅಳವಡಿಸಿಕೊಂಡಿರುತ್ತೇನೆ. ನಂತರ ದಿನಾಂಕ 19-05-2021 ರಂದು ಪ್ರಕರಣದ 5 ನೇ ಆರೋಪಿಯಾದ ಬಶೀರ್ ರವರಿಂದ ಸ್ವಇಚ್ಛಾ ಹೇಳಿಕೆಯನ್ನು ಪಡೆದು, ನಂತರ ಠಾಣಾ ಜಾಮೀನಿನ ಮೇಲೆ ಬಿಡುಗಡೆ ಮಾಡಿರುತ್ತೇನೆ. ನಂತರ ದಿನಾಂಕ 04-08-2021 ರಂದು ಸದರಿ ಪ್ರಕರಣದಲ್ಲಿ ತನಿಖೆಯನ್ನು ಪೂರ್ಣಗೊಳಿಸಿ, ಆರೋಪಿಗಳ ವಿರುದ್ಧ ದೋಷರೋಪ ಸಾಬೀತಾದ್ದರಿಂದ ತನಿಖೆಯನ್ನು ಪೂರ್ಣಗೊಳಿಸಿ ನ್ಯಾಯಾಲಯಕ್ಕೆ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿರುತ್ತೇನೆ. ಸಾಕ್ಷಿಯು ನ್ಯಾಯಾಲಯದ ಮುಂದಿರುವ ಆರೋಪಿಗಳನ್ನು ನೋಡಿ ಗುರುತಿಸುತ್ತಾರೆ.

6. ಸಾಕ್ಷಿಯು ಕೃತ್ಯ ಸ್ಥಳದ ಮಹಜರನ್ನು ನೋಡಿ ಗುರುತಿಸಿದ್ದನ್ನು ಈಗಾಗಲೇ ನಿಪಿ7 ಎಂದು ಗುರುತಿಸಲಾಗಿದೆ. ಸಾಕ್ಷಿಯ ಸಾಕ್ಷಿಯನ್ನು ನಿಪಿ7 ಜಿ ಎಂದು ಗುರುತಿಸಲಾಯಿತು. ಸಾಕ್ಷಿಯು ಅಮಾನತ್ತು ಮಹಜರನ್ನು ನೋಡಿ ಗುರುತಿಸಿದ್ದನ್ನು ಈಗಾಗಲೇ ನಿಪಿ8 ಎಂದು ಗುರುತಿಸಲಾಗಿದೆ. ಸಾಕ್ಷಿಯ ಸಾಕ್ಷಿಯನ್ನು ನಿಪಿ8 ಎಫ್ ಎಂದು ಗುರುತಿಸಲಾಯಿತು. ಸಾಕ್ಷಿಯು ಅಮಾನತ್ತು ಮಹಜರನ್ನು ನೋಡಿ ಗುರುತಿಸಿದ್ದನ್ನು ಈಗಾಗಲೇ ನಿಪಿ9 ಎಂದು ಗುರುತಿಸಲಾಗಿದೆ. ಸಾಕ್ಷಿಯ ಸಾಕ್ಷಿಯನ್ನು ನಿಪಿ9 ಎಫ್ ಎಂದು ಗುರುತಿಸಲಾಯಿತು. ಸಾಕ್ಷಿಯು ಚಾಸಾ14 ರವರು ನೀಡಿರುವ ವೈದ್ಯಕೀಯ ದೃಢೀಕರಣ ಪತ್ರವನ್ನು ನೋಡಿ ಗುರುತಿಸಿದ್ದನ್ನು ಈಗಾಗಲೇ ನಿಪಿ19 ಎಂದು ಗುರುತಿಸಲಾಗಿದೆ. ಸಾಕ್ಷಿಯ ಸಾಕ್ಷಿಯನ್ನು ನಿಪಿ19 ಬಿ ಎಂದು ಗುರುತಿಸಲಾಯಿತು. ಸಾಕ್ಷಿಯು ಚಾಸಾ10 ರವರು ನೀಡಿರುವ 65 ಬಿ ಪ್ರಮಾಣ ಪತ್ರವನ್ನು ನೋಡಿ ಗುರುತಿಸಿದ್ದನ್ನು ಈಗಾಗಲೇ ನಿಪಿ18 ಎಂದು ಗುರುತಿಸಲಾಗಿದೆ. ಸಾಕ್ಷಿಯ ಸಾಕ್ಷಿಯನ್ನು ನಿಪಿ18 ಬಿ ಎಂದು ಗುರುತಿಸಲಾಯಿತು. ಸಾಕ್ಷಿಯು ಮಹಜರಿನ ಸಮಯದಲ್ಲಿ ತೆಗೆದ ಭಾವಚಿತ್ರಗಳನ್ನು ನೋಡಿ ಗುರುತಿಸಿದ್ದನ್ನು ಈಗಾಗಲೇ ನಿಪಿ 3 ರಿಂದ 5 ಎಂದು ಗುರುತಿಸಲಾಗಿದೆ. ಸಾಕ್ಷಿಯು ನಿಪಿ9 ನ್ನು ಜರುಗಿಸುವ ಸಮಯದಲ್ಲಿ ಎರಡು ಭಾವಚಿತ್ರಗಳನ್ನು ತೋರಿಸಿ, ಅದನ್ನು ಗುರುತಿಸಿದ್ದರಿಂದ ಒಟ್ಟಾಗಿ ನಿಪಿ 22 ಎಂದು ಗುರುತಿಸಲಾಯಿತು. ಸಾಕ್ಷಿಯು ಸರ್ವೆ ನಂ. 201/4 ರ ಪಹಣಿ ಪತ್ರಿಕೆಯನ್ನು ನೋಡಿ ಗುರುತಿಸಿದ್ದನ್ನು ನಿಪಿ23 ಎಂದು ಗುರುತಿಸಲಾಯಿತು. ಸಾಕ್ಷಿಯು ಅಮಾನತ್ತುಪಡಿಸಿಕೊಂಡ ಮು ಮಾ 1 ರಿಂದ 13 ನ್ನು ನೋಡಿ ಗುರುತಿಸುತ್ತಾರೆ.

ಮುಖ್ಯ ವಿಚಾರಣೆ ಮುಕ್ತಾಯ.

ಈ ಹಂತದಲ್ಲಿ ಅಪರಾಹ್ನ ವಿರಾಮ ಸಮಯವಾದ ಕಾರಣ, ಈ ಪ್ರಕರಣವನ್ನು 3.00 ಗಂಟೆಗೆ ಕರೆಯತಕ್ಕದ್ದು.

**ಪಾಟಿ ಸವಾಲು : ಆರೋಪಿಗಳ ಪರ ಶ್ರೀ. ಎ ಎಂಎಲ್  ವಕೀಲರಿಂದ ಃ**

1. ನಾನು ಅಂತಿಮ ವರದಿಯನ್ನು ಸಲ್ಲಿಸುವ ಪೂರ್ವದಲ್ಲಿ ಕಡತದ ಎಲ್ಲಾ ದಾಖಲೆಗಳನ್ನು ಪರಿಶೀಲನೆ ಮಾಡಿರುತ್ತೇನೆ ಎಂದರೆ ಸರಿ. ಕೃತ್ಯ ಸ್ಥಳದಲ್ಲಿ ಕುಯ್ದಿದಿರುವ ಹಸು ಚಾಸಾ1 ರವರಿಗೆ ಸೇರಿದ ಹಸು ಎಂದು ಯಾವ ಆಧಾರದ ಮೇಲೆ ಗೊತ್ತಾಯಿತು ಎಂಬ ಪ್ರಶ್ನೆಗೆ ಸಾಕ್ಷಿಯು ಕುಯ್ದಿದಿರುವ ಹಸುವಿನ ಚರ್ಮದ ಬಣ್ಣದಿಂದ ಗೊತ್ತಾಯಿತು ಎನ್ನುತ್ತಾರೆ. ಹಸುವನ್ನು ಗುರುತಿಸಲು ಅದರ ಕಿವಿಗೆ ಒಂದು ಗುರುತಿನ ಬಿಲ್ಲೆ ಇರುತ್ತದೆ ಎಂದರೆ ಸಾಕ್ಷಿಯು ಸದರಿ ಹಸು ನೋಂದಾಯಿಸಿರುವುದಿಲ್ಲ ಎನ್ನುತ್ತಾರೆ. ಚಾಸಾ1 ರವರ ಅಕ್ಕಪಕ್ಕದ ಜನರಿಗೆ ಸದರಿಯವರಿಗೆ ಹಸು ಇರುವಿಕೆಯ ಬಗ್ಗೆ ವಿಚಾರಿಸಿರುವುದಿಲ್ಲ. ವೈದ್ಯಾಧಿಕಾರಿಗಳು ಹಸುವಿನ ಕಳೆಬರಹ ಇರುವಿಕೆ ಬಗ್ಗೆ ದೃಢೀಕರಣ ಪತ್ರ ನೀಡಿರುತ್ತಾರೆ ಎಂದರೆ ಸರಿ. ಅದು ಮರಣೋತ್ತರ ಪರೀಕ್ಷೆಯ ವರದಿ ಅಲ್ಲ ಎಂದರೆ ಸರಿ.

2. ಮಹಜರಿನ ಸಮಯದಲ್ಲಿ ಪಂಚರಾಗಲು ಚಾಸಾ4 ರಿಂದ 7 ರವರಿಗೆ ನೋಟಿಸ್ ನೀಡಿರುತ್ತೇನೆ. ಹಸುವನ್ನು ಯಾವ ಸ್ಥಳದಿಂದ ಆರೋಪಿತರು ಕಳುವು ಮಾಡಿರುತ್ತಾರೆಂದು ತಮ್ಮ ಹೇಳಿಕೆಯಲ್ಲಿ ನುಡಿದಿರುವುದಿಲ್ಲ. ನಾನು ಈ ಕುರಿತು ತನಿಖೆಯನ್ನು ನಡೆಸಿಲ್ಲ. ಎಲ್ಲಾ ಆರೋಪಿಗಳು ಸೇರಿ ಹಸುವನ್ನು ಕೊಂದಿರುತ್ತಾರೆ. ದಿನಾಂಕ 16-05-2021 ರಂದು 4ನೇ ಆರೋಪಿರವರ ಮನೆಯಲ್ಲಿ ಸಿಕ್ಕಿರುವ ಥಾಟ್ ಮೇಲೆ ಇರುವ ರಕ್ತದ ಕಲೆಗಳು ಅದು ಹಸುವಿನ ರಕ್ತ ಕಲೆ ಎಂದು ಹೇಳಲು ಎಫ್ ಎಸ್ ಎಲ್ ಗೆ ಕಳುಹಿಸಲು ತೊಂದರೆಯಿತ್ತಾ ಎಂಬ ಪ್ರಶ್ನೆಗೆ ಸಾಕ್ಷಿಯು ಅವಶ್ಯಕತೆ ಕಂಡು ಬಂದಿರುವುದಿಲ್ಲ ಎನ್ನುತ್ತಾರೆ.

3. ಚಾಸಾ-1 ರವರು ಗೋಮಾಂಸ ತಿನ್ನುತ್ತಾರೆ ಹಾಗೂ ಮಾರಾಟ ಮಾಡುತ್ತಾರೆಂಬ ಪ್ರಶ್ನೆಗೆ ಸಾಕ್ಷಿಯು ನನಗೆ ಗೊತ್ತಿಲ್ಲ ಎನ್ನುತ್ತಾರೆ. ಆರೋಪಿಗಳು ಯಾವ ವ್ಯಕ್ತಿಗಳಿಗೆ ಮಾಂಸವನ್ನು ಮಾರಾಟ ಮಾಡಿರುತ್ತಾರೆ ಅಂತಹ ವ್ಯಕ್ತಿಗಳಿಗೆ ಈ ಪ್ರಕರಣದಲ್ಲಿ ಸಾಕ್ಷಿಗಳನ್ನಾಗಿ ಪರಿಗಣಿಸಿರುವುದಿಲ್ಲ. ಆರೋಪಿಗಳು ಯಾವುದೇ ಕೃತ್ಯವನ್ನು ಎಸಗಿರುವುದಿಲ್ಲ ಎಂದರೆ ಸರಿಯಲ್ಲ. ಮು ಮಾಲುಗಳು ಈ ಪ್ರಕರಣಕ್ಕೆ ಸಂಬಂಧಪಟ್ಟಿಲ್ಲ ಎಂದರೆ ಸರಿಯಲ್ಲ. ಆರೋಪಿಗಳ ವಿರುದ್ಧ ಸುಳ್ಳು ಅಂತಿಮ ವರದಿಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಕೃತ್ಯ ಸ್ಥಳ ಯಾರಿಗೆ ಸೇರಿದೆ ಎಂದು ಗ್ರಾಮ ಲೆಕ್ಕಾಧಿಕಾರಿ ಕಡೆಯಿಂದ ಸ್ವಳ ಪರಿಶೀಲನೆ ಮಾಡಿ ಯಾವುದೇ ದಾಖಲೆಯನ್ನು ಪಡೆದಿರುವುದಿಲ್ಲ. ಸಾಕ್ಷಿಯು ಮುಂದುವರೆದು ಕೃತ್ಯ ಸ್ವಳದ ಜಾಗದ ಮಾಲೀಕರಿಂದ

ಪಹಣಿ ಪತ್ರಿಕೆಯನ್ನು ಪಡೆದುಕೊಂಡಿರುತ್ತೇನೆ ಎನ್ನುತ್ತಾರೆ. ಸದರಿಯವರನ್ನು ಪ್ರಸ್ತುತ ಪ್ರಕರಣದಲ್ಲಿ ಸಾಕ್ಷಿಯಾಗಿ ಪರಿಗಣಿಸಲು ಯಾವುದೇ ತೊಂದರೆ ಇರಲಿಲ್ಲ.

ಪಾಟಿ ಸವಾಲು ಮುಕ್ತಾಯ.

ಮರು ವಿಚಾರಣೆ ಇಲ್ಲ.

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಿಂದ ಬೆರಳಚ್ಚು ಪಡಿಸಲಾಯಿತು.)
ಓ ಹೇ ಕೇ ಸ ಇದೆ,

ಸಹಿ/-
(ಪ್ರದೀಪ ಪೋತದಾರ)
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂ., ವಿರಾಜಪೇಟೆ